# ಗಾಳಿಪಟದ ಹುಡುಗಿಯ ಹೊಸಪುಟ

**‘ಗಾಳಿಪಟ’ದ ಹುಡುಗಿ ಭಾವನಾ ರಾವ್, ತಮ್ಮ ವೃತ್ತಿಬದುಕಿನಲ್ಲಿ ಹೊಸ ತಿರುವಿಗೆ ಹೊರಳಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ. ನಟಿಸಿದ ಸಿನಿಮಾಗಳ ಸಂಖ್ಯೆ ಚಿಕ್ಕದಾಗಿದ್ದರೂ ಪರವಾಗಿಲ್ಲ, ಅವು ಜನರ ಮನಸಲ್ಲಿ ನೆಲೆಯೂರಬೇಕು ಎಂಬ ಹಂಬಲ ಅವರದ್ದು.**



■ **ಪದ್ಮನಾಭ ಭಟ್**

‘ನದೀಂ ಧೀಮ್ ತನ...’ ಎಂದು ಶುರುವಾಗುವ ‘ಗಾಳಿಪಟ’ ಸಿನಿಮಾದ ಹಾಡು ಕೇಳಿದ ತಕ್ಷಣ ಮನಸ್ಸಿನೊಳಗೆ ಹರಿತ ಕಣ್ಣಿನ ತುಂಟ ಹುಡುಗಿಯೊಬ್ಬಳ ಚಿತ್ರ ಮೂಡುತ್ತದೆ. ಹದಿನಾಲ್ಕು ವರ್ಷಗಳ ಹಿಂದೆ ಬಿಡುಗಡೆಯಾದ ಸಿನಿಮಾವೊಂದರ ಹಾಡಿನ ಜೊತೆಗೆ ಭಾವನಾ ರಾವ್ ಎಂಬ ಹುಡುಗಿಯ ಚಿತ್ರವೂ ಶಾಶ್ವತವಾಗಿ ಸೇರಿಹೋಗಿದೆ. ಹಾಗಾಗಿಯೇ ಭಾವನಾ ಅವರನ್ನು ಜನರು ಇಂದಿಗೂ ‘ಗಾಳಿಪಟ’ದ ಪಾವನಾ ಆಗಿಯೇ ಗುರ್ತಿಸುತ್ತಾರೆ.

ಅಂದಿನ ಎಳಸು ಹುಡುಗಿ ಭಾವನಾ ಈಗ ಪ್ರಬುದ್ಧೆಯಾಗಿ ಬೆಳೆದಿದ್ದಾರೆ. ಇತ್ತೀಚೆಗಷ್ಟೇ ಮೂವತ್ಮೂರನೇ ಹುಟ್ಟುಹಬ್ಬ ಆಚರಿಸಿಕೊಂಡಿರುವ ಭಾವನಾ ಅವರ ಮಾತಿನಲ್ಲಿಯೂ ಆ ಪ್ರಬುದ್ಧತೆ ಎದ್ದು ಕಾಣುತ್ತದೆ.

‘‘ಗಾಳಿಪಟ’ ಸಿನಿಮಾವನ್ನು ನಾನು ಆಯ್ಕೆ ಮಾಡಿಕೊಳ್ಳಲಿಲ್ಲ. ಆ ಸಿನಿಮಾವೇ ನನ್ನನ್ನು ಆಯ್ಕೆ ಮಾಡಿಕೊಂಡಿತು’’ ಎಂದು ನಗುವ ಭಾವನಾ ಅವರಿಗೆ ಆ ದಿನಗಳ ಬಗ್ಗೆ ಮಾತಾಡುವಾಗ ಭಾವುಕತೆಯ ಸೆಲೆಯೊಂದು ಹಾದುಹೋಗುತ್ತದೆ. ‘ನನಗೆ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆಯೇನೋ ಇತ್ತು. ಆದರೆ ಅದು ಅಷ್ಟು ಬೇಗ ಸಾಧ್ಯವಾಗುತ್ತದೆ ಎಂದು ಅಂದುಕೊಂಡಿರಲಿಲ್ಲ. ಎಲ್ಲವೂ ಒಮ್ಮಿಂದೊಮ್ಮೆಲೇ ಎನ್ನುವಷ್ಟು ಬೇಗ ನಡೆದುಹೋಯಿತು. ಮೊದಲ ಸಿನಿಮಾದಲ್ಲಿ ದೊಡ್ಡ ಮಟ್ಟದಲ್ಲಿ ನೇಮು ಫೇಮು ಎಲ್ಲವೂ ಸಿಕ್ಕಿತು. ಆ ವಯಸ್ಸಿಗೆ ಅದನ್ನು ಹೇಗೆ ನಿಭಾಯಿಸಬೇಕು ಎಂಬ ಪ್ರಬುದ್ಧತೆಯೂ ಇರಲಿಲ್ಲ. ನನ್ನ ಮನೆಯವರಿಗೂ ಇದನ್ನೆಲ್ಲ ಅರಗಿಸಿಕೊಳ್ಳಲು ಒಂದಿಷ್ಟು ಸಮಯ ತೆಗೆದುಕೊಂಡಿತು’ ಎನ್ನುವ ಭಾವನಾಗೆ ತಾವು ಸಾಗಿಬಂದ ದಾರಿಯ ಬಗ್ಗೆ ಖುಷಿಯೇ ಇದೆ.



‘ಇಷ್ಟು ವರ್ಷಗಳಲ್ಲಿ ನಾನು ಎಷ್ಟು ಸಿನಿಮಾದಲ್ಲಿ ನಟಿಸಿದ್ದೇನೆ ಎಂಬ ಸಂಖ್ಯೆ ನನಗೆ ಅಷ್ಟೊಂದು ಮುಖ್ಯ ಅನಿಸುವುದಿಲ್ಲ. ವರ್ಷಕ್ಕೆ ನಾಲ್ಕು ಸಿನಿಮಾದಲ್ಲಿಯೂ ನಟಿಸಬಹುದು, ಒಂದೇ ಸಿನಿಮಾದಲ್ಲಿಯೂ ನಟಿಸಬಹುದು. ಆದರೆ ಎಷ್ಟು ಪಾತ್ರಗಳು ಜನರ ಮನಸಲ್ಲಿ ಉಳಿದುಕೊಳ್ಳುತ್ತದೆ ಎಂಬುದು ಮುಖ್ಯ. ನಂತರದ ದಿನಗಳಲ್ಲಿ ನಾನು ಎಷ್ಟೊಂದು ಸಿನಿಮಾಗಳಲ್ಲಿ ನಟಿಸಿದ್ದರೂ ನನ್ನನ್ನು ಈಗಲೂ ಗಾಳಿಪಟ ಸಿನಿಮಾದ ಪಾತ್ರದ ಮೂಲಕವೇ